Reg. No. | | | | | | | | | |

**BSCKAL 254/FNDKAL 254/ BFTKAL 254/HRDKAL 254**

## IV Semester B.Sc./B.Sc.(FND)/B.Sc.(BFT)/B.Sc.(HRD) Degree Examination, April/May 2019

*(Credit Based Semester Scheme)*

*(2018-19 Batch onwards)*

**KANNADA**

**Paper IV – Kannada Language**

**ಕನ್ನಡ ಭಾಷಾ ಪತ್ರಿಕೆ – IV**

Time : 3 Hours] [Max. Marks : 80

I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(3 × 8 = 24)**

1. 'ಅನಿಲಾನಿಲ ಸಂಯೋಗಂ' ಪದ್ಯ ಭಾಗದಲ್ಲಿ ಕಂಡು ಬರುವ ಭೀಮ–ದ್ರೌಪದಿಯರ ಸಂವಾದದ ಕುರಿತು ವಿವರಿಸಿರಿ.

ಅಥವಾ

Shri Dharmasthala Manjunatheshwara College of Business Management Library MANGALORE - 575 003

ಜ್ಞಾನವೆನ್ನುವುದು ನಮ್ಮೊಳಗೇ ಮೂಡಿ ಬೆಳೆಯಬೇಕಾದ ತಿಳುವಳಿಕೆ ಎನ್ನುವುದನ್ನು ಸರ್ವಜ್ಞನ ವಚನಗಳು ಹೇಗೆ ಪ್ರತಿಪಾದಿಸುತ್ತವೆ?

2. ಸಾಮಾಜಿಕ ಪಿಡುಗೊಂದರ ದುಷ್ಪರಿಣಾಮವನ್ನು ಗೌರಮ್ಮನವರ 'ಆಹುತಿ' ಕತೆ ಹೇಗೆ ವಿವರಿಸುತ್ತದೆ?

ಅಥವಾ

ಅಣ್ವಸ್ತ್ರ ಬಳಕೆಯ ಭಯಾನಕ ಪರಿಣಾಮವನ್ನು 'ಸಸಕಿ ನೆನಪಿಗೊಂದು ಪೇಪರ್ ಹಕ್ಕಿ' ಪ್ರಬಂಧವು ವಿವರಿಸುವ ಬಗೆ ಹೇಗೆ?

3. ಸೀತಾ ಸ್ವಯಂವರ ಸಂದರ್ಭದಲ್ಲಿ ಅತಿಕಾಯ, ಇಂದ್ರಜಿತು ವರ್ತಿಸಿದ ರೀತಿಯು ಕಾವ್ಯ ಭಾಗದಲ್ಲಿ ಹೇಗೆ ಮೂಡಿ ಬಂದಿದೆ?

ಅಥವಾ

'ಮದುವೆಯ ಹಂದರ' ಕಾವ್ಯ ಭಾಗದಲ್ಲಿ ತುಳುನಾಡಿನ ಸಂಪ್ರದಾಯಗಳ ಕುರಿತಾದ ವಿಚಾರಗಳು ಹೇಗೆ ಮೂಡಿ ಬಂದಿದೆ?



P.T.O.

II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : (3 × 5 = 15)

1. ಭಾರತದ ಸಾಮಾಜಿಕ ಮತ್ತು ರಾಜಕೀಯ ಸ್ಥಿತ್ಯಂತರಗಳ ಕುರಿತು 'ಕಳಕೊಂಡವರು' ಕವನ ಹೇಗೆ ನಿರೂಪಿಸುತ್ತದೆ?

ಅಥವಾ

'ಕಂಪಣ' ಕವನದಲ್ಲಿ ದುಡಿಯುವ ವರ್ಗದ ಜನರ ನಿಷ್ಕಲ್ಮಶತೆಯನ್ನು ಕವಿ ಹೇಗೆ ವ್ಯಕ್ತಪಡಿಸಿದ್ದಾರೆ?

2. 'ಭಾಷಾ ವೈವಿಧ್ಯವು ಜೀವ ವೈವಿಧ್ಯದಷ್ಟೇ ಮುಖ್ಯ' ಎನ್ನುವ ವಿಚಾರವನ್ನು ಲೇಖನದಲ್ಲಿ ಹೇಗೆ ಚರ್ಚಿಸಿದ್ದಾರೆ? ವಿವರಿಸಿರಿ.

ಅಥವಾ

'ಮಾನವನ ಬಾಳಿಗೆ ಅರಿವು ಮೂಡಿಸುವ ಕಾರ್ಯವನ್ನು 'ಝೆನ್' ಕತೆಗಳು ಹೇಗೆ ಮಾಡುತ್ತವೆ? ವಿವರಿಸಿರಿ.

3. ಜನಕ ಮಹಾರಾಜನು ತನ್ನ ಮಕ್ಕಳ ಮದುವೆಯ ಸಿದ್ಧತೆಯನ್ನು ಹೇಗೆ ಮಾಡಿದನು? ವಿವರಿಸಿರಿ.

ಅಥವಾ

ರಾಮನ ಪಾತ್ರ ಚಿತ್ರಣ ಕಾವ್ಯ ಭಾಗದಲ್ಲಿ ಹೇಗೆ ಮೂಡಿ ಬಂದಿದೆ?

III. ಕೆಳಗಿನ **ಒಂದು** ಪದ್ಯ ಭಾಗದ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿರಿ : (1 × 5 = 5)

1. ಕುರುಕುಲ ಶೋಣಿತ ಪಾದಪದ್ಮತಳಂ ತಳೋ
ದರಿಗೆ ವೃಕೋದರನಾಗಿಪಂ ಕಚಬಂಧಬಂ
ಧುರತೆಯನಾತನ ಪೂಣ್ದ ಪೂಣ್ಕೆ ಶಿಲಾತಳಾ
ಕ್ಷರ ಮೆನಿಸಿರ್ಪ ಜನೋಕ್ತಿಯಂ ಪುಸಿಮಾಟ್ಪನೇ

2. ಬಣ್ಣದಲ್ಲದ್ದಿ ಬದುಕ ರಂಗೇರಿಸುವ ಬಯಕೆ
ಮದುವೆ ಹಬ್ಬಗಳಲ್ಲಿ ಜೊತೆಗೂಡುವಾಸೆ
ಬಚ್ಚಿಟ್ಟಿರುವೆ ಗರಿಗೆದರಿದ ಆಸೆಗಳ ಎದೆಗೂಡಿನೊಳಗೆ
ಗಾಯವ ಮುಟ್ಟಿಮುಟ್ಟಿ ನೋಡುವ ಜನರ ಭಯಕೆ

IV. (ಅ) ಕೆಳಗಿನ **ಎರಡು** ಸಾಲುಗಳ ಸಂದರ್ಭ ಸೂಚಿಸಿ ಅರ್ಥ ವಿಶೇಷತೆಗಳನ್ನು ಬರೆಯಿರಿ : (2 × 4 = 8)

1. ಬಲ್ಲೆನೆಂಬಾ ಮಾತು ಎಲ್ಲವೂ ಹುಸಿ ಕಣಾ
2. ನನಗೆ ಅರಿವು ಬಂತು ನಾನೂ ಒಬ್ಬ ಮನುಷ್ಯನೆಂದು
3. ಕಣ್ಣ ಕಾಂತಿ ಎಣ್ಣೆಯಾಗಿ ಉರಿವ ನಂದಾ ದೀಪ ಒಲವು
4. ಸೊಸೆಯಾಗಿ ಬಪ್ಪೋಳು ಕೂಸನ್ನೇ (ಸೊಸೆಯಾಗಿ ಬರುವವಳು ಹೆಣ್ಣಲ್ಲವೇ)

(ಆ) ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ : (2 × 4 = 8)

1. ಓ.ಎಲ್. ನಾಗಭೂಷಣ ಸ್ವಾಮಿ
2. ಅಗ್ನಿ ದಿವ್ಯದ ಹುಡುಗಿ
3. 'ಆಹುತಿ' ಕತೆಯ ವಿಜಯ
4. ಹಿರೋಶಿಮ – ನಾಗಸಾಕಿ

(ಇ) ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ : (2 × 4 = 8)

1. ಮಂದಾರ ಕೇಶವ ಭಟ್ಟ
2. ಕೌಶಿಕ
3. ಜನಕ ಮಹಾರಾಜ
4. ಸೀತೆಯ ಶೃಂಗಾರ

V. ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : (12 × 1 = 12)

1. ರನ್ನನ ಹುಟ್ಟೂರು ಯಾವುದು?
2. 'ಪಾದಪ' ಪದದ ಅರ್ಥವೇನು?
3. 'ಬುದ್ಧ' ಕವನವನ್ನು ಬರೆದವರು ಯಾರು?
4. ಯು. ದಿವಾಕರ ರೈಯವರ ಮೊದಲ ಕವನ ಸಂಕಲನ ಯಾವುದು?
5. ಆನಂದಿ ಬಾಯಿ ಜೋಶಿಯವರ ಪತಿಯ ಹೆಸರೇನು?
6. 'ಟವರ್ ಆಫ್ ಬಾಬೆಲ್' ಯಾವ ವಿಷಯದ ಕುರಿತಾದ ಪುರಾಣ ಕಥೆ?
7. ಲ್ಯುಕೇಮಿಯಾ ರೋಗಕ್ಕೆ ಸಸಕಿಯ ಅಮ್ಮ ಹಾಗೂ ಇನ್ನಿತರ ಜನರು ಇಟ್ಟ ಹೆಸರೇನು?
8. 'ಝೂನ್' ಪದದ ಅರ್ಥವೇನು?
9. ಇಂಗ್ಲೀಷಿನ Epic (ಎಪಿಕ್) ಪದಕ್ಕೆ ಸಮಾನಾರ್ಥಕವಾಗಿ ಕನ್ನಡದಲ್ಲಿ ಬಳಸುವ ಪದ ಯಾವುದು?
10. ಶಂಭುಕ ಯಾರು?
11. ಶ್ರೀ ಕೃಷ್ಣನ ಲೀಲೆಗಳನ್ನು ತಿಳಿಸುವ ಮಂದಾರ ಕೇಶವ ಭಟ್ಟರ ತುಳು ಕೃತಿ ಯಾವುದು?
12. ಜನಕ ಮಹಾರಾಜನ ಸಹೋದರನ ಹೆಸರೇನು?

Shri Dharmasthala Manjunatheshwara
College of Business Management Library
MANGALORE - 575 003

---